**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ ನಂ. 2136/2016**

| | | |
|---|---|---|
| ಹೆಸರು | : | ಗಿರಿಜ |
| ಗಂಡನ ಹೆಸರು | : | ಗಜೇಂದ್ರ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಹೊಂ ಗಾರ್ಡ್, ಎಸ್ ಜೆ ಪಾರ್ಕ್ ಪೋಲಿಸ್ ಠಾಣೆ |
| ವಾಸ | : | ವಿಜಯಪುರ |

**PW-6, CW-7**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 25-09-2025.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನಾನು 2013 ನೇ ಸಾಲಿನಿಂದ 2017 ರವರೆಗೆ ಚಿಕ್ಕಜಾಲ ಸಂಚಾರ ಪೋಲಿಸ್ ಠಾಣೆಯಲ್ಲಿ ಹೊಂ ಗಾರ್ಡ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.19-02-2016 ರಂದು ಬೆಳಿಗ್ಗೆ 8.00 ರಿಂದ ಮದ್ಯಾಹ್ನ 2.00 ಗಂಟೆಯವರೆಗೆ ಎಮ್ ವಿ ಐ ಟಿ ಕ್ರಾಸ್ ಬಳಿ ಜಂಕ್ಷನ್ ನಲ್ಲಿ ಕರ್ತವ್ಯಕ್ಕೆ ನೇಮಕವಾಗಿದ್ದು, ಅದರಂತೆ ನಾನು ಕರ್ತವ್ಯದಲ್ಲಿದ್ದಾಗ ಚಾಸಾ-6 ರವರು ಒಂದು ಕಡೆಯಲ್ಲಿ ಮತ್ತು ನಾನು ಸರ್ವೀಸ್ ರಸ್ತೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬೆಳಿಗ್ಗೆ 9.30 ಗಂಟೆಯ ಸಮಯದಲ್ಲಿ ಡಂ ಎಂದು ಜೊರಾಗಿ ಶಬ್ದ ಕೇಳಿದ್ದು, ನಾನು ನೋಡಲಾಗಿ ಒಬ್ಬ ಮಹಿಳೆಗೆ ವ್ಯಾನ್ ನಂ. ಕೆಎ-03-ಎಮ್ ಜೆ -9903 ವಾಹನವು ಡಿಕ್ಕಿಪಡಿಸಿದ ಪರಿಣಾಮ ಸದರಿ ಮಹಿಳೆಯು ಸ್ಥಳದಲ್ಲಿ ಜ್ಞಾನ ತಪ್ಪಿ ಬಿದ್ದಿದ್ದು, ಅವಳನ್ನು ಚಾಸಾ-6 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ನಾನು ನನ್ನ ಕರ್ತವ್ಯ ಮುಂದುವರೆಸಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಸ.ಸ.ಅ ರವರು ಕೋರಿದ್ದು ಸಾಕ್ಷಿಯು ಭಾಗಶಃ ಅಭಿಯೋಜನ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವ ಕಾರಣ ಮಾನ್ಯ ಸ ಸ ಅ ರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದ**

ಅಪಘಾತವಾದ ನಂತರ ನಾನು, ಚಾಸಾ-1 ಮತ್ತು 6 ರವರು ಸ್ಥಳಕ್ಕೆ ಹೋಗಿ ನೋಡಿರುತ್ತೇವೆ ಎಂದರೆ ಸರಿ. ಅಪಘಾತಕ್ಕೊಳಗಾದ ಮಹಿಳೆಯನ್ನು ಚಾಸಾ-1 ಮತ್ತು 6 ರವರು ಅಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಆಗ

ಒಬ್ಬ ಹುಡುಗನು ಅಲ್ಲಿಯೇ ಇದ್ದು, ಗಾಯಗೊಂಡವರು ಆತನ ತಾಯಿ ನಿಶಾಮಿಶ್ರ ಎಂದು ಹಾಗೂ ಅವರು ದೆಹಲಿಯಿಂದ ಬೆಂಗಳೂರಿಗೆ ಬಂದಿರುವುದಾಗಿ ಹೇಳಿರುತ್ತಾರೆ ಎಂದರೆ ಸರಿ. ಅಪಘಾತಮಾಡಿದ ಕಾರಿನ ಚಾಲಕನು ಕಾರನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ವಾಹನವು ಸ್ವಿಫ್ಟ್ ಕಾರ್ ಎಂದರೆ ಸರಿ. ಸದರಿ ಅಪಘಾತಕ್ಕೊಳಗಾದ ಮಹಿಳೆಯು ಆಸ್ಪತ್ರೆಗೆ ಹೋಗುವ ಮಾರ್ಗ ಮಧ್ಯದಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಕಾರನ್ನು ನ್ಯಾಯಾಲಯದ ಮುಂದಿರುವ ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ನಿಶಾಮಿಶ್ರ ರವರಿಗೆ ಅಪಘಾತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂದ ನಾನು ಪೋಲಿಸರಿಗೆ ದಿ.19-02-2016 ರಂದು ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಈ ಪ್ರಕರಣದ ಅಪಘಾತಕ್ಕೆ ಆರೋಪಿಯೇ ಕಾರಣ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎ ವಿ ಆರೋಪಿ ಪರ ವಕೀಲರಿಂದ**

ಘಟನಾ ಸ್ಥಳದಲ್ಲಿ ಪಾದಚಾರಿಗಳು ರಸ್ತೆ ದಾಟಲು ಪಾದಚಾರಿ ಮಾರ್ಗ ಇರುವುದಿಲ್ಲ ಎಂದರೆ ಸರಿ. ನಾನು ಕರ್ತವ್ಯ ನಿರ್ವಹಿಸುತ್ತಿದ್ದ ಸ್ಥಳಕ್ಕೂ ಅಪಘಾತದ ಸ್ಥಳಕ್ಕೂ 100 ಮೀ ಅಂತರ ಇರುತ್ತದೆ. ಪ್ರಸ್ತುತ ಪ್ರಕರಣವು ಮೃತಳ ಅಜಾಗರೂಕತೆಯಿಂದ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,
ದೇವನಹಳ್ಳಿ.